ನಾವು ಮಾಡಿದ್ದೆವು. ಇದರಿಂದ ರೈತರಿಗೂ ಸಂತೋಷವಾಗಿತ್ತು. ಅದನ್ನು ಮುಂದುವರೆಸಬೇಕೆನ್ನುವ ಅಭಿಪ್ರಾಯವನ್ನಿಟ್ಟುಕೊಂಡು ಹಾಗೂ ಅಂಕಿ-ಅಂಶಗಳನ್ನಿಟ್ಟು ಮಾತನಾಡುವವನಿದ್ದೇನೆ. ತಾವು ಅನುಮತಿ ಕೊಟ್ಟಾಗ ಚರ್ಚೆ ಪ್ರಾರಂಭಿಸೋಣ.

ಅಧ್ಯಕ್ಷರು:- ವಾಟಾಳ್‌ರವರೇ, ತಾವು ಸ್ವಲ್ಪ ಸಹಕರಿಸಬೇಕು. ನಮ್ಮ ತಿಪಟೂರಿನ ಶಾಸಕರಾದ ನಂಜಾಮರಿಯವರು 5-6 ದಿವಸಗಳಿಂದ ನನ್ನ ಹತ್ತಿರ ಬಂದು ಕೊಬ್ಬರಿ ಬೆಳೆಗಾರರಿಗೆ ಹಾಗೂ ವರ್ತಕರಿಗೆ ತೊಂದರೆಯಾಗಿದೆಯೆಂದು ಹೇಳುತ್ತಿದ್ದರು. ತಾವು ಹಾಗೂ ನಂಜೇಗೌಡರು ಒಳಗೊಂಡಂತೆ ಎಲ್ಲರೂ ಅವರ ಪರವಾಗಿ ವಕಾಲತ್ತು ವಹಿಸಲು ಒಪ್ಪಿಕೊಂಡಿದ್ದೀರಿ. ಮಾನ್ಯ ನಂಜಾಮರಿರವರು ಇದರ ಬಗ್ಗೆ ಓದಬೇಕಾಗಿಲ್ಲ. ಹಾಗೆಯೇ ಹೇಳಿ.

ವಿಷಯ:- ತಿಪಟೂರಿನಲ್ಲಿ ಕೊಬ್ಬರಿ ವರ್ತಕರು ಅನಿರ್ದಿಷ್ಟ ಕಾಲದವರೆಗೆ ವ್ಯಾಪಾರವನ್ನು ನಿಲ್ಲಿಸಿರುವ ಬಗ್ಗೆ. ------

ಶ್ರೀ ಬಿ.ನಂಜಾಮರಿ(ತಿಪಟೂರು):- ಮಾನ್ಯ ಅಧ್ಯಕ್ಷರೇ, ದಿನಾಂಕ 18. 3. 1995ರಂದು ತಿಪಟೂರಿನಲ್ಲಿ ಕೊಬ್ಬರಿ ವರ್ತಕರು ತಮ್ಮ ವ್ಯಾಪಾರವನ್ನು ಅನಿರ್ದಿಷ್ಟ ಕಾಲದವರೆಗೆ ನಿಲ್ಲಿಸಿದ್ದಾರೆ. ಏಕೆಂದರೆ, 1990ರವರೆಗೆ ಸದರಿ ವರ್ತಕರು ಸಿಪಾರಂ ಕೊಡುತ್ತಿದ್ದರು. ಘನ ಸರ್ಕಾರ ವರ್ತಕರ ಮನವಿಯನ್ನು ಸ್ವೀಕರಿಸಿ; ದಿನಾಂಕ 2. 1. 1990 ರಿಂದ ಸಿ ಫಾರಂ ಅನ್ನು ವಜಾಗೊಳಿಸಿತ್ತು. ಆಗಿನಿಂದ ಸಿ ಫಾರಂ ಅನ್ನು ಕೊಡುತ್ತಿರಲಿಲ್ಲ. 1992ನೇ ಏಪ್ರಿಲ್ 1 ರಿಂದ ಶೇಕಡ 4ರಷ್ಟು ತೆರಿಗೆ ಕಟ್ಟುತ್ತಿದ್ದಾಗ ಶೇಕಡ 1 ರಷ್ಟು ತೆರಿಗೆ ಕಡಿಮೆ ಮಾಡಲಾಗಿತ್ತು. ಅದುವರೆಗೆ ಸಿ ಫಾರಂ ತೆಗೆದುಕೊಳ್ಳುತ್ತಿರಲಿಲ್ಲ. ಈಗ ಅಧಿಕಾರಿಗಳು 1992-93ನೇ ಸಾಲಿನ ಲೆಕ್ಕ ಪತ್ರಗಳನ್ನು ತರಿಸಿಕೊಂಡು ಅಸೆಸ್‌ಮೆಂಟ್ ಮಾಡಿದ್ದಾರೆ. ಈಗ ಆ ಅಧಿಕಾರಿಗಳು ಸಿ ಫಾರಂ ಕೊಡಿ ಇಲ್ಲವಾದರೆ ಶೇಕಡ 1 ರಷ್ಟು ತೆರಿಗೆ ಕಟ್ಟಬೇಕೆಂದು ನೋಟೀಸ್ ಜಾರಿ ಮಾಡಿದ್ದಾರೆ. ಇದರಿಂದ ವರ್ತಕರು ಕಳೆದ ಎಂಟು ದಿವಸಗಳಿಂದ ಅನಿರ್ದಿಷ್ಟ ಕಾಲದವರೆಗೆ ತಮ್ಮ ಕೊಬ್ಬರಿ ವಹಿವಾಟನ್ನು ನಿಲ್ಲಿಸಿದ್ದಾರೆ.

ಅಧ್ಯಕ್ಷರು:- ಕೊಬ್ಬರಿ ವಹಿವಾಟು ನಿಂತು ಹೋಗಿದೆ. ಯುಗಾದಿ ಹಬ್ಬ ಹತ್ತಿರ ಬರುತ್ತಿದೆ, ತೊಂದರೆಯಾಗುತ್ತಿದೆ ಎಂಬುದು ತಮ್ಮ ವಿಚಾರ. ಚಿಕ್ಕಮಗಳೂರು, ಹಾಸನ, ತುಮಕೂರು ಎಲ್ಲರೂ ಕೊಬ್ಬರಿಯವರೇ ತಾನೇ, ದಯಮಾಡಿ ಕುಳಿತುಕೊಳ್ಳಿ. ವಾಟಾಳ್ ನಾಗರಾಜ್‌ರವರೇ, ಚಾಮರಾಜನಗರದಲ್ಲೂ ಕೊಬ್ಬರಿ ಬೆಳೆಯುತ್ತೀರಾ? ಅಲ್ಲಿ ಕೊಬ್ಬರಿ ಇಲ್ಲದೆ ಹೋದರೆ ನಿಮಗೆ ಅವರ ಬಗ್ಗೆ ಎಷ್ಟು ಆಸಕ್ತಿ ಇದೆಯೆಂಬುದನ್ನು ಎಲ್ಲರಿಗೂ ಗೊತ್ತಾಗಲಿ ಎಂದು ನಾನು ಹೇಳಿದೆ. ನಿಮ್ಮೆಲ್ಲರ ಪರವಾಗಿ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾರೆ. ಜಯಚಂದ್ರರವರೇ, ಶಿವರಾಮುರವರೇ, ಶಿವನಂಜಪ್ಪನವರೇ, ತಾವುಗಳು ದಯಮಾಡಿ ಕುಳಿತುಕೊಳ್ಳಿ ಅವಕಾಶ ಕೊಡುತ್ತೇನೆ. ಮಾನ್ಯ ಸದಸ್ಯರಾದ

ನಂಜಾಮರಿಯವರು ಕಳೆದ 5-6 ದಿವಸಗಳಿಂದ ಸತತವಾಗಿ ನನ್ನನ್ನು ಭೇಟಿ ಮಾಡಿ ಏನಾದರೂ ಮಾಡಿ ನಾನು ಇದನ್ನು ಪ್ರಸ್ತಾಪಿಸಲು ಸದನದಲ್ಲಿ ಅವಕಾಶ ಕೊಡಬೇಕೆಂದು ಕೇಳಿದರು. ನಿನ್ನೆಯೂ ಸಹ ಅವರ ಜೊತೆ ವಾಟಾಳ್ ನಾಗರಾಜ್‌ರವರು ಇದ್ದಾಗ ನಾನು ಅವರು ಹೊಸ ಸದಸ್ಯರಾಗಿರುವುದರಿಂದ ನೀವೆಲ್ಲಾ ಅವರಿಗೆ ಸ್ವಲ್ಪ ಚೈತನ್ಯ ಕೊಡಿ, ಇದು ಬಹಳ ಗಂಭೀರವಾದ ವಿಷಯ ಎಂದು ಹೇಳಿದೆ. ಅದಕ್ಕೋಸ್ಕರ, ಈಗ ಅವರು ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಈಗ....ಇಲ್ಲಿ ಕೊಬ್ಬರಿ ಕೆಲವರ ಸ್ವತ್ತು ಎಂದಾಗಿದೆ. ಕೊಬ್ಬರಿ ಬೆಳೆ ಸಮಗ್ರವಾಗಿ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಎಲ್ಲಾ ಶಾಸಕರ ಸ್ವತ್ತು. ಇದು ಕೆಲವರ ಸ್ವತ್ತಲ್ಲ. ಶ್ರೀಮಾನ್ ಶಿವನಂಜಪ್ಪನವರು ನನಗೆ ಕೊಬ್ಬರಿ ಬಗ್ಗೆ ಏನು ಗೊತ್ತಾಗುತ್ತದೆಂದು ಹೇಳಿದರು. ಹಾಗಾದರೆ, ನಮ್ಮಲ್ಲಿ ಕೊಬ್ಬರಿ ಬೆಳೆಯುವುದಿಲ್ಲವೇ? ಅವರು ಜಾಸ್ತಿ ಬೆಳೆಯಬಹುದು, ನಾವು ಕಡಿಮೆ ಬೆಳೆಯಬಹುದು. ಅದು ಬೇರೆ ಪ್ರಶ್ನೆ. ಈಗ ಅವರು ಏನು ಪ್ರಸ್ತಾಪಿಸಿದ್ದಾರೆ, ಇದರ ಬಗ್ಗೆ ಮುಖ್ಯ ಮಂತ್ರಿಗಳು ತಮ್ಮ ಗಮನ ಹರಿಸಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಕೊಬ್ಬರಿ ಎಲ್ಲರ ಸ್ವತ್ತಲ್ಲ. ಕೊಬ್ಬರಿ ಮಹಿಳೆಯರ ಸ್ವತ್ತು. ಮಹಿಳೆಯರಿಗೆ ಯುಗಾದಿ ಹಬ್ಬಕ್ಕೆ ಕೊಬ್ಬರಿ ಬೇಕು. ಆದ್ದರಿಂದ ಅದು ನಮ್ಮ ಸ್ವತ್ತು.

ಶ್ರೀ ಬಿ.ನಂಜಾಮರಿ:- ಅಧ್ಯಕ್ಷರೇ, 5-6 ಜಿಲ್ಲೆಗಳಲ್ಲಿ ಕೊಬ್ಬರಿ ಬೆಳೆದರೂ ಅದು ತಿಪಟೂರು ಮಾರುಕಟ್ಟೆಗೆ ಬಂದು ಬೇರೆ ರಾಜ್ಯಗಳಿಗೆ ಹೋಗುತ್ತದೆ.

ಅಧ್ಯಕ್ಷರು:- ನಿಮ್ಮ ಪರವಾಗಿಯೇ ಅವರು ಮಾತನಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಕೊಬ್ಬರಿಯಿಂದ ಮಾಡಿಕ್ಕಂಥ ಅನೇಕ ಪದಾರ್ಥಗಳಾವುವು ಎಂಬುದು ಅನೇಕರಿಗೆ ಗೊತ್ತಿಲ್ಲ. ಅದನ್ನೆಲ್ಲಾ ನಾವು ಉಪಯೋಗಿಸತಕ್ಕಂಥವರು. ಕೊಬ್ಬರಿ ಎಣ್ಣೆಯಿಂದಿಡಿದು, ಹೋಳಿಗೆಯಿಂದಿಡಿದು, ಚಟ್ನಿಯಿಂದಿಡಿದು, ಉಪ್ಪಿಟ್ಟಿನಿಂದಿಡಿದು, ಚಿತ್ರಾನ್ನದಿಂದಿಡಿದು, ಕೊಬ್ಬರಿ ಮಿಠಾಯಿಯವರೆಗೆ ಹೀಗೆ ಎಲ್ಲವನ್ನೂ ಕೊಬ್ಬರಿಯಿಂದಲೇ ಮಾಡುತ್ತೇವೆ. ಆದುದರಿಂದ, ಈಗ ನೀವೂ ಸಂಬಂಧಪಟ್ಟವರು, ನಾವು ಸಂಬಂಧಪಟ್ಟವರು, ಇಲ್ಲಿರತಕ್ಕಂಥವರೆಲ್ಲಾ ಸಂಬಂಧಪಟ್ಟವರು. ಕೆಲವರು ಅದನ್ನು ಇವರೇ ಮಾಡಬೇಕು, ಅವರೇ ಮಾಡಬೇಕು ಎಂದು ಮಡಿವಂತಿಕೆ ಮಾಡುತ್ತಿರುವುದು ಸರಿಯಲ್ಲ. ಕೊಬ್ಬರಿ ಬೆಳೆಯನ್ನು ಈ ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವಂತಹವರು ಪ್ರಮುಖವಾಗಿ ತಿಪಟೂರು, ತುಮಕೂರು ಜಿಲ್ಲೆಯವರು. ಈ ವ್ಯವಸ್ಥೆ ಆ ಜಿಲ್ಲೆಗಳಲ್ಲಿದೆ. ಸುಮಾರು 5-6 ದಿವಸಗಳಿಂದ ಸಾಕಷ್ಟು ಪ್ರಮಾಣದಲ್ಲಿ ಕೊಬ್ಬರಿ ಬೆಳೆಯತಕ್ಕಂಥ ಎಲ್ಲಾ ಜಿಲ್ಲೆಗಳ ಕೋಟ್ಯಾಂತರ ರೂಪಾಯಿಗಳ ಕೊಬ್ಬರಿ ಹರಾಜಾಗದೇ ಅಲ್ಲಿನ ಪ್ರಾಮಾಣಿಕರಾದ ಜನರು ಬಹಳ ದುಃಖದಲ್ಲಿದ್ದಾರೆ,

ತೊಂದರೆಯಲ್ಲಿದಾದರೆ. ಇದರ ಕಡೆ ಮುಖ್ಯ ಮಂತ್ರಿಗಳು ಗಮನ ಹರಿಸುತ್ತಿಲ್ಲ.

ಅಧ್ಯಕ್ಷರು:- ಇದು ಕೃಷಿ ಸಚಿವರಾದ ಬೈರೇಗೌಡರಿಗೆ ಸಂಬಂಧಿಸಿದ್ದುದು.

ಶ್ರೀ ವಾಟಾಳ್ ನಾಗರಾಜ್:- ಶ್ರೀ ಬೈರೇಗೌಡರು ಮಂತ್ರಿಯಾದ ಮೇಲೆ ಅಪರೂಪವಾಗಿ ಪ್ರಪ್ರಥಮವಾಗಿ ಬಹಳ ದಿವಸಗಳ ನಂತರ ನಾನು ಅವರಿಗೆ ಪ್ರಶ್ನೆ ಕೇಳುತ್ತಿದ್ದೇನೆ. ಆದುದರಿಂದ, ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಅವರ ಗಮನ ಸೆಳೆಯುತ್ತಿದ್ದೇನೆ. ಈ ಬಗ್ಗೆ ತಾವು ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳಬೇಕು. ತಾವು ಏನಾದರೂ ರೈತರನ್ನು ಕರೆಯಿಸಿ ಈ ದಿಸೆಯಲ್ಲಿ ಮಾತುಕತೆಯಾಡಿದ್ದೀರಾ? ಅವರ ಮೇಲೆ ವಿಧಿಸಿರತಕ್ಕ ತೆರಿಗೆ ಬಗ್ಗೆ ಸಿ ಫಾರಂ ಬಗ್ಗೆ ಮತ್ತು ದೌರ್ಜನ್ಯ ನಡೆಯುತ್ತಿರುವ ಬಗ್ಗೆ ಹಾಗೂ ನಿಮ್ಮ ಅಧಿಕಾರಿಗಳು ಅವರಿಗೆ ತೊಂದರೆ ಕೊಡುತ್ತಿರುವ ಬಗ್ಗೆ ನೀವು ಏನು ಕ್ರಮ ಕೈಗೊಂಡಿದ್ದೀರಿ ಎಂಬ ಬಗ್ಗೆ ತಾವು ತೀವ್ರವಾಗಿ ಹೇಳಬೇಕು. ಈಗ ನೀವು ಪರಿಣಾಮಕಾರಿಯಾಗಿ ಹೇಳಿ, ಅವರ ಸತ್ಯಾಗ್ರಹವನ್ನು ನಿಲ್ಲಿಸಿ, ಪ್ರತಿಭಟನೆಯನ್ನು ನಿಲ್ಲಿಸಿ. ಆ ರೈತರಿಗೆ ಅನುಕೂಲ ಮಾಡಿಕೊಡದಿರತಕ್ಕ ವಚನವನ್ನು ತಾವು ಈ ಸದನದಲ್ಲಿ ಕೊಡುವುದಾದರೆ ತಮ್ಮ ವಿರುದ್ಧ ಪ್ರತಿಭಟನೆ ಮಾಡಬೇಕಾದಂಥ ಪ್ರಸಂಗ ಉದ್ಭವವಾಗುತ್ತದೆ ಎನ್ನತಕ್ಕ ಎಚ್ಚರಿಕೆಯನ್ನು ಅಧ್ಯಕ್ಷರ ಮೂಲಕ ತಮಗೆ ಕೊಡುತ್ತಿದ್ದೇನೆ.

ಶ್ರೀ ಡಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು:- ಆಯಿತು ಕುಳಿತುಕೊಳ್ಳಿ, ಶ್ರೀ ಜಯಚಂದ್ರರವರೇ,

ಶ್ರೀ ಟಿ.ಬಿ.ಜಯಚಂದ್ರ:- ಇದು ಪ್ರಶ್ನೆ ಅಲ್ಲ. ಕಾಲಿಂಗ್ ಅಟೆನ್‌ಷನ್ ಕೊಟ್ಟು 4-5 ದಿವಸ ಆಯಿತು. ಯಾವತ್ತು ಸ್ಟೈಕ್ ಪ್ರಾರಂಭವಾಯಿತೋ....

ಅಧ್ಯಕ್ಷರು:- ಪುಟ್ಟೇಗೌಡರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ:- ನಾನು ಇದರ ಬಗ್ಗೆ ಇವತ್ತು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಸಿ.ಎಸ್.ಪುಟ್ಟೇಗೌಡ:- ಕೊಬ್ಬರಿ ವಿಚಾರ ಮಾತನಾಡುವುದಕ್ಕೆ ಹೋದರೆ ಕೊಬ್ಬರಿ ಯಾರ ಸ್ವತ್ತು ಅಲ್ಲ ಎಂದು ಹೇಳುತ್ತಾರೆ. ಅಲ್ಲಿರುವ 25 ಜನರ ಸ್ವತ್ತೇ ಈ ಶಾಸನ ಸಭೆ ? ಸ್ವಾಮಿ ಹೈಯಸ್ಟ್ ಕೊಬ್ಬರಿ ಬೆಳೆದು ತಿಪಟೂರ+ ಮಾರ್ಕೆಟ್ಟಿಗೆ ಹೊಡೆಯೋರು ನಾವು. ನಾವು ಮಾತನಾಡುವುದಕ್ಕೆ ಹೋದರೆ ಕೊಬ್ಬರಿ ಯಾರ ಸ್ವತ್ತಲ್ಲ ಎನ್ನುತ್ತಾರೆ.

ಅಧ್ಯಕ್ಷರು:- ಚಿನ್ನರಾಯಪಟ್ಟಣದಲ್ಲಿ ಜಾಸ್ತಿ ಕೊಬ್ಬರಿ ಬೆಳೆಯುತ್ತಾರೆ ಎಂದು ನನಗೆ

ಗೊತ್ತಿದೆ. ಪುಟ್ಟೇಗೌಡರೇ, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:- ಶಿವರಾಮುರವರೇ, ದಯಮಾಡಿ ಕುಳಿತುಕೊಳ್ಳಿ, ಪುಟ್ಟೇಗೌಡರೇ,

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಶಾಸನ ಸಭೆ 25 ಜನರ ಸ್ವತ್ತು ಅಲ್ಲ ಅಂದಿರಿ. ಈ ಸಭೆಯನ್ನೇ ಹಾಸನದವರ ಕೈಯಲ್ಲಿ ಕೊಟ್ಟಿದ್ದೇವೆ. ಈ ಸದನ, ಸಭೆ, ರಾಜ್ಯ ಎಲ್ಲಾ ಅವರ ಜಿಲ್ಲೆಗೇ ಕೊಟ್ಟಿದ್ದೇವಲ್ಲಾ ಸ್ವಾಮಿ.

ಅಧ್ಯಕ್ಷರು:- ಪುಟ್ಟೇಗೌಡರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ:- ಸಭಾಧ್ಯಕ್ಷರೇ, ಇದರಲ್ಲಿ ಒಂದು ಬಹಳ ಮುಖ್ಯವಾಗಿರತಕ್ಕಂಥ ಪ್ರಶ್ನೆ ಅಡಕವಾಗಿರತಕ್ಕಂಥಾದ್ದು ಏನೆಂದರೆ.....

ಅಧ್ಯಕ್ಷರು:- ನೀವು ಹೇಳಿದಿರಿ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೇನೆ ಎಂದು. ಇಲ್ಲರತಕ್ಕಂಥವರು ಎಲ್ಲರೂ ಗಮನಿಸುತ್ತಿದ್ದೀರಿ. ಕಳೆದ ಕೆಲವು ದಿನಗಳಿಂದ ಇಲ್ಲಿ ನಡೆದಂಥ ಕೆಲವು ಪ್ರಸಂಗಗಳಿಂದಾಗಿ ನಾವು ಅಂದು ಕೊಂಡಂತೆ ರೀತಿಯಲ್ಲಿ ಕಲಸ ಮಾಡುವುದಕ್ಕಾಗಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಸಾರ್ವಜನೀಕ ಮಹತ್ವ ಇರತಕ್ಕ ಎಲ್ಲಾ ವಿಷಯಗಳನ್ನು ಯಾವುದಾದರೂ ಒಂದು ರೂಪದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಹೇಳಿ, ಯಾರ್ಯಾರು ನನ್ನನ್ನು ಭೇಟಿಯಾಗಿದ್ದಾರೆ, ನನ್ನ ಕಛೇರಿಗೆ ಸೂಚನೆಗಳು ಬಂದಿವೆ, ಅದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಯಾವುದೇ ಒಂದು ರೀತಿಯಲ್ಲಿ ಅರೇಂಜ್ ಮಾಡುತ್ತಿದ್ದೇವೆ. ಆದ್ದರಿಂದ ಬೇರೆ ಏನೋ ಆಗಿದೆ ಎನ್ನುವ ಭಾವನೆಗೆ ಬರುವುದು ಬೇಡ. ಶನಿವಾರ ದಿವಸ ಪ್ರಶ್ನೋತ್ತರ ವೇಳೆ ಇಲ್ಲ.

ಶ್ರೀ ಟಿ.ಬಿ.ಜಯಚಂದ್ರ:- ಕೊಬ್ಬರಿ ವಿಷಯದಲ್ಲಿ ನಾವು ಪ್ರಸ್ತಾಪ ಮಾಡತಕ್ಕಂಥಾದ್ದು ಏನಾಗಿದೆ ಎಂದರೆ 1993-94ನೇ ಸಾಲಿನಲ್ಲಿ 1.00 ಪರ್ಸೆಂಟ್ ತೆರಿಗೆಯನ್ನು ರೈತರಿಂದ ವಸೂಲು ಮಾಡಲಿಲ್ಲ. ವರ್ತಕರು ಕಟ್ಟಲಿಲ್ಲ ಎನ್ನುವ ಕಾರಣಕ್ಕೋಸ್ಕರ ಈಗ ಹೀಗೆ ಮಾಡುತ್ತಿದ್ದೀರಿ. ಆದರೆ, 1993-94ನೇ ಸಾಲಿನಲ್ಲಿ ಆ ತೆರಿಗೆಯನ್ನು ಕೇಳಲಿಲ್ಲ. ಅಸ್ಸೆಸ್ ಮಾಡತಕ್ಕಂಥ ಸಂದರ್ಭದಲ್ಲಿ ಇದು ಪ್ರಾಬ್ಲಮ್ ಬಂದಿರತಕ್ಕಂಥಾದ್ದು. ಕಳೆದ 8 ದಿವಸಗಳಿಂದ ಸ್ಟೈಕ್ ನಡೆಯುತ್ತಾ ಇರತಕ್ಕಂಥಾದ್ದು; ಬಹಿರಂಗವಾಗಿ ಅದನ್ನು ಎಲ್ಲರೂ ಕೂಡ ಪ್ರಚಾರವನ್ನು ಕೊಟ್ಟು ಸರ್ಕಾರದ ವಿರುದ್ಧವಾಗಿ ವಹಿವಾಟನ್ನು ನಾವು ನಿಲ್ಲಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರೂ ಕೂಡ ಸರ್ಕಾರದವರು ಇಲ್ಲಿಯವರೆಗೆ, ಇದು ಬೈರೇಗೌಡರಿಗೆ ಸಂಬಂಧಪಟ್ಟಿರತಕ್ಕಂಥಾದಲ್ಲ. ಮಾರುಕಟ್ಟೆ ಮಿನಿಸ್ಟರ್ ಆಗಿರತಕ್ಕಂಥವರು ಅಥವಾ

ಫೈನಾನ್ಸ್‌ಗೆ ಸಂಬಂಧಪಟ್ಟಂಥವರು ಯಾರಾದರೂ ಅಲ್ಲಿಗೆ ಹೋಗಿ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಮಾಡಲಿಲ್ಲ. ಇದು ಕಮರ್ಷಿಯಲ್ ಟ್ಯಾಕ್ಸ್ ಪ್ರಾಬ್ಲಮ್ ನಿಂದ ಉದ್ಭವವಾಗಿರತಕ್ಕಂಥ ಪ್ರಶ್ನೆ. ಆದರೆ ಏತಕ್ಕೋಸ್ಕರ ನಿಲ್ಲಿಸಲಾಯಿತು ಎನ್ನುವಂಥ ಪ್ರಸ್ತಾಪವನ್ನು ಇಲ್ಲಿಯವರೆಗೂ ಯಾರೂ ಮಾಡಲಿಲ್ಲ. ಇದರಿಂದ ಪರಿಣಾಮ ಏನಾಯಿತು ಎಂದರೆ.....

ಅಧ್ಯಕ್ಷರು:- ಆಯಿತು ಪ್ರಸ್ತಾಪ ಮಾಡಿದಿರಲ್ಲಾ. ಸಮಯ ಹೆಚ್ಚು ತೆಗೆದುಕೊಳ್ಳುವುದು ಬೇಡ.

ಶ್ರೀ ಟಿ.ಬಿ.ಜಯಚಂದ್ರ:- ಇದರ ಬಗ್ಗೆ ಏನಾದರೂ ಖಚಿತವಾಗಿ ಹೇಳಿಬಿಟ್ಟರೆ ಸರಿಹೋಗುತ್ತದೆ.

ಅಧ್ಯಕ್ಷರು:- ಹೇಳುತ್ತಾರೆ. ಇವೆರಡೂ ಅಲ್ಲದೆ ಹೊಸದಾಗಿ ತಾವು ಬೇರೆ ಏನಾದರೂ ಹೇಳುವುದು ಇದೆಯೇ? ಒಂದು ನಿಮಿಷ ನಂಜಾಮರಿಯವರೇ, ನೀವು ಏಕೆ ಹೀಗೆ ಮಾಡುತ್ತೀರಿ, ನಿಮಗೆ ಅವಕಾಶ ಕೊಟ್ಟ ಮೇಲೂ. ನೀವು ಮಾತನಾಡಲಿಲ್ಲವೇ? ಅವರು ಉತ್ತರ ಕೊಡುವುದಕ್ಕೆ ಮೊದಲೇ ಅದನ್ನೂ ನೀವೇ ಮಾಡಿಬಿಡುತ್ತೀರಾ?

ಶ್ರೀ ಬಿ.ಶಿವಾರಾಂ:- ಹೊಸ ವಿಚಾರ ಏನೂ ಇಲ್ಲ. ಶೇ. 1.00ರಷ್ಟು ತೆರಿಗೆಯನ್ನು ಕಡಿಮೆ ಮಾಡಿ, ಸಿ ಫಾರಂ ಇಲ್ಲ ಎಂದು ಹೇಳಿ ಕಲಕ್ಷನ್ ಮಾಡಲಿಲ್ಲ, ಈಗ ಆ ಟ್ಯಾಕ್ಸನ್ನು ಕೊಡಬೇಕು ಎನ್ನತಕ್ಕಂಥ ಒತ್ತಡ ಏನು ಕಮರ್ಷಿಯಲ್ ಟ್ಯಾಕ್ಸ್‌ನವರಿಂದ ಪ್ರಾರಂಭವಾಗಿದೆ, ಈಗ ಅದನ್ನು ಕೊಡಲಿಕ್ಕಾಗದೇ ವರ್ತಕರು ವ್ಯಾಪಾರವನ್ನು ನಿಲ್ಲಿಸಿದ್ದಾರೆ.

ಅಧ್ಯಕ್ಷರು:- ಸಿ ಫಾರಮ್ಸ್, ಡಿ ಫಾರಮ್ಸ್, ವ್ಯವಹಾರ ನಿಂತಿದೆ. ಅದನ್ನು ಚಾಲನೆಗೆ ತರಬೇಕು. ಅದನ್ನು ಮಾಡೋಣ. ಕಮರ್ಷಿಯಲ್ ಟ್ಯಾಕ್ಸ್‌ನವರಿಗೆ ಹೇಳಬೇಕು. ಅದನ್ನು ಮಾಡೋಣ. ದಯಮಾಡಿ ತಾವು ಉತ್ತರ ನೀಡಿ.

ಶ್ರೀ ಸಿ.ಬೈರೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಕೊಬ್ಬರಿ ಬಗ್ಗೆ ಈಗಾಗಲೇ ಸನ್ಮಾನ್ಯ 3 ಜನ ಸದಸ್ಯರು ಮಾತನಾಡಿದ್ದಾರೆ.

ಅಧ್ಯಕ್ಷರು:- ಅವರು ಮೇನ್ ಕನ್‌ಸರ್ನ್ ಇಷ್ಟೆ. ಕಮರ್ಷಿಯಲ್ ಟ್ಯಾಕ್ಸ್‌ನವರು ಯಾರಾದರೂ ಆ ಕಡೆಗೆ ತಿರುಗಿ ನೋಡಿಲ್ಲ. ವಹಿವಾಟು ನಿಂತು ಬಿಟ್ಟಿದೆ. ಯುಗಾದಿ ಹಬ್ಬದ ಸಮಕ್ಕೆ ಬಹಳ ತೊಂದರೆಯಾಗುತ್ತದೆ. 8 ದಿವಸಗಳಿಂದ ಎಜಿಟೇಷನ್ ನಡೆಯುತ್ತಾ ಇದೆ . ದಯಮಾಡಿ ಇಲ್ಲಿ ಹಣಕಾಸಿನ ಸಚಿವರು ಇಲ್ಲದೇ ಇರುವುದರಿಂದ ತಾವು ತಕ್ಷಣ ಅಲ್ಲಿ ಅಧಿಕಾರಿಗಳಿಗೆ ಏನು ಇನ್‌ಸ್ಟ್ರಕ್ಷನ್ ಕೊಡಬೇಕೋ, ಕೊಟ್ಟು ನಿಂತಿರತಕ್ಕಂಥ ವಹಿವಾಟು ಚಾಲನೆಗೆ ಬರುವುದಕ್ಕೆ, ರೈತರಿಗೆ, ವ್ಯಾಪಾರಸ್ಥರಿಗೆ ತೊಂದರೆಯಾಗದಂತೆ ಮಾಡತಕ್ಕಂಥ ವ್ಯವಸ್ಥೆ

ಮಾಡಬೇಕು.

ಶ್ರಿ ಬಿ.ಶಿವರಾಮು :- ಟ್ಯಾಕ್ಸ್ ಅನ್ನು ಕಡಿಮೆ ಮಾಡಬೇಕು.

ಅಧ್ಯಕ್ಷರು:- ಆಯಿತು ಶಿವರಾಂರವರೇ.

ಶ್ರೀ ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಸೂಕ್ಷ್ಮವಾಗಿ ನನಗೆ ತಿಳಿದಿರತಕ್ಕಂಥ ಮಾಹಿತಿ ಏನು ಎಂದರೆ ಇವರು ಹಿಂದೆಯಲ್ಲಾ ಈ ಟ್ಯಾಕ್ಸನ್ನು ಕೊಡಬೇಕಾಗಿರಲಿಲ್ಲ. ಆದರೂ ಸಹ ಟ್ಯಾಕ್ಸ್ ಅಸೆಸ್‌ಮೆಂಟ್ ಮಾಡಿದ್ದಾರೆ. ಅದು ಮಾರುಕಟ್ಟೆಯಲ್ಲಿ ರೈತರು ಅಥವಾ ಯಾರು ಕೊಂಡುಕೊಳ್ಳುತ್ತಾರೋ ಅವರಿಂದ ಆ ಕರ ವಸೂಲಿ ಆಗಬೇಕಾಗಿತ್ತು. ಆದರೆ ಅವರಿಂದ ವರ್ತಕರು ವಸೂಲಿ ಮಾಡಿಲ್ಲ. ಆದರೆ ನಮ್ಮ ಮೇಲೆ ಈ ಅಸೆಸ್ ಮಾಡಿದ್ದಾರೆ ಎಂಬುದು ಅವರ ದೂರು ಇರತಕ್ಕಂಥಾದ್ದು. ಈ ವಿಚಾರದಲ್ಲಿ ತಾವು ಹೇಳಿದ ಹಾಗೆ ಸನ್ಮಾನ್ಯ ಅರ್ಥಸಚಿವರು ಇವತ್ತಿನ ದಿವಸ ಇಲ್ಲಿ ಇಲ್ಲ. ಇದು ನೇರವಾಗಿ ಅವರಿಗೆ ಸಂಬಂಧಪಟ್ಟಿರತಕ್ಕ ವಿಚಾರ, ಹಣಕಾಸಿನ ವಿಚಾರ. ಮತ್ತೊಂದು ಈ ಸಂದರ್ಭದಲ್ಲಿ ಹೇಳತಕ್ಕಂಥಾದ್ದು ಏನೆಂದರೆ ನಾನು ವೈಯಕ್ತಿಕವಾಗಿ, ನನ್ನ ಪರವಾಗಿ ಹೇಳತಕ್ಕಂಥಾದ್ದು ಏನೆಂದರೆ ಈ ಕೊಬ್ಬರಿ ವ್ಯಾಪಾರದಲ್ಲಿ ಸಾಕಷ್ಟು ಅಲ್ಲಿ ಟ್ಯಾಕ್ಸ್ ಇವೇಷನ್ ಆಗುತ್ತಾ ಇದೆ ಎನ್ನತಕ್ಕಂಥಾದ್ದು. ಒಬ್ಬ ಸಾಮಾನ್ಯ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಅಧ್ಯಕ್ಷರೇ, ಅದಕ್ಕೆ ಸಂಬಂಧ ಇಲ್ಲ. ಉತ್ತರ ಕೊಟ್ಟು ಪ್ರತಿಭಟನೆ ಮಾಡುವವರನ್ನು ಎಬ್ಬಿಸುವ ಬದಲು ಇವರು ಇನ್ನೇನೋ ಹೇಳುತ್ತಿದ್ದಾರೆ. ಅದು ಅರ್ಥವಿಲ್ಲದ್ದು. ಸರ್ಕಾರದ ನಿರ್ಧಾರ ಸರಿಯಲ್ಲ. ನಾನು ಹೇಳುತ್ತೇನೆ ಕೇಳಿ. ಇದರಿಂದ ಅಲ್ಲಿ ಪ್ರತಿಭಟನೆ ನಿಲ್ಲುವುದಿಲ್ಲ. ವೈಯಕ್ತಿಕವಾಗಿ ಹೇಳುವುದಕ್ಕೆ ನೀವು ಯಾರು ? ಮಂತ್ರಿಯಾಗಿ ನೀವು ಹೇಳಬೇಕು, ಈ ಸರ್ಕಾರದ ರಾಜ್ಯ ಮಂತ್ರಿಯಾಗಿ ಹೇಳಿ.

(ಗೊಂದಲ)

ಅಧ್ಯಕ್ಷರು :- ನೀವು ನನ್ನ ನೆರವಿಗೆ ಬರುತ್ತೀರಿ ಅಂದರೆ, ನೀವು ನನ್ನನ್ನು ತೊಂದರೆಯಲ್ಲಿ ಸಿಕ್ಕಿ ಹಾಕಿಸಿಬಿಟ್ಟಿರಿ.

ಶ್ರೀ ವಾಟಾಳ್ ನಾಗರಾಜ್:- ವೈಯಕ್ತಿಕ ಮತ್ತು ಖಾಸಗಿ ವಿಚಾರಗಳನ್ನು ಮನೆಯಲ್ಲಿ ಇಡಿ. ಈ ಸದನದಲ್ಲಿ ತಾವು ಒಬ್ಬ ಸಚಿವರಾಗಿ ಮಾತನಾಡಿ. ಸರ್ಕಾರದ ರಾಜ್ಯ ಮಂತ್ರಿಯಾಗಿ ನೀವು ಹೇಳಬೇಕು.

(ಗೊಂದಲ)

ಶ್ರೀ ಬೈರೇಗೌಡ:- ನಾನು ನಿಮ್ಮ ಹಾಗೆ ಒಬ್ಬ ಸದಸ್ಯ.....

ಶ್ರೀ ಹೆಚ್.ಎನ್.ನಂಜೇಗೌಡ :- ಈಗ ಸರ್ಕಾರ ಏನೂ ಮಾಡುತ್ತಿಲ್ಲ, ಇನ್‌ಎಫಿಷಿಯೆಂಟ್ ಆಗಿದೆ. ಆದ್ದರಿಂದ ಟ್ಯಾಕ್ಸ್ ಇವೇಡ್ ಆಗುತ್ತಿದೆ ಎಂದು ಅವರು ಹೇಳುತ್ತಿದ್ದಾರೆ. ಅದನ್ನು ನಾವು ಒಪ್ಪಿಕೊಳ್ಳೋಣ. ಅದಕ್ಕೆ ಏಕ್ ಚಿಂತೆ.

ಶ್ರೀ ಬೈರೇಗೌಡ :- ನಂಜೇಗೌಡರೇ, ನಾನು ಹೇಳದೆ ಇರತಕ್ಕಂಥಾದನ್ನು ನನ್ನ ಬಾಯಲ್ಲಿ ಹಾಕಲು ಬರಬೇಡಿ. ನೀವು ಅತ್ಯಂತ ಜಾಣರು, ಬುದ್ಧಿವಂತರು ಎಂಬುದು ಗೊತ್ತಿದೆ. ಆದ್ದರಿಂದ ನಾನು ಹೇಳದೇ ಇರುವುದನ್ನು ತಾವು ದಯವಿಟ್ಟು ನನ್ನ ಬಾಯಿಗೆ ಹಾಕುವುದಕ್ಕೆ ಬರಬೇಡಿ. ಆದ್ದರಿಂದ ಆ ವಿಚಾರದಲ್ಲಿ ಯೂ ಸಹ ನಾವು ಕ್ರಮ ತೆಗೆದುಕೊಳ್ಳಬೇಕಾದಂಥ ಅವಶ್ಯಕತೆ ಇದೆ ಎನ್ನುತಕ್ಕ ವಿಷಯವನ್ನು ಈ ಸಂದರ್ಭದಲ್ಲಿ ಹೇಳಿ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ಅವರು ಪ್ರತಿಭಟನೆ ನಿಲ್ಲಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಅದನ್ನು ಹೇಳಿ.

ಶ್ರೀ ಬೈರೇಗೌಡ:- ನಾನು ಸನ್ಮಾನ್ಯ ಆರ್ಥ ಸಚಿವರ ಗಮನಕ್ಕೆ ಈ ವಿಷಯವನ್ನು ತಕ್ಷಣ ತಂದು ಅವರು ಬಗೆಹರಿಸತಕ್ಕಂಥದಕ್ಕೆ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಮುಖ್ಯಮಂತ್ರಿಗಳಿದ್ದಾರೆ. ಇದರ ಬಗ್ಗೆ ಸ್ಪಷ್ಟ ನಿರ್ಧಾರ ಹೇಳಬೇಕು. ಇದು ಸರಿಯಲ್ಲ. ಇದನ್ನು ನಾನು ಒಪ್ಪುವುದಿಲ್ಲ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ನನ್ನದು ಒಂದು ಸಲಹೆ ಇದೆ.

(ಗೊಂದಲ)

ಅಧ್ಯಕ್ಷರು:- ಒಂದು ನಿಮಿಷ. ದಯಮಾಡಿ ಖರ್ಗೆಯವರು ಏನು ಹೇಳುತ್ತಾರೆ ಕೇಳೋಣ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೇ, ಈಗ ಆರ್ಥ ಸಚಿವರಾದ ಶ್ರೀಮಾನ್ ಸಿದ್ದರಾಮಯ್ಯನವರು ಇಲ್ಲಿ ಇಲ್ಲ. ಈ ವಿಷಯ ನೇರವಾಗಿ ಅವರಿಗೆ

ಸಂಬಂಧಪಟ್ಟಿರುವಂಥ ವಿಷಯ. ಅದಕ್ಕಾಗಿ ಐದು ಗಂಟೆಯೊಳಗೆ ಅಥವಾ ಆರು ಗಂಟೆಯೊಳಗಾಗಿ ಅವರನ್ನು ಕರೆಯಿಸಿ ಒಂದು ಸ್ಟೇಟ್‌ಮೆಂಟ್ ಮಾಡಿಸಿ.

ಅಧ್ಯಕ್ಷರು:- ಮಾಡಿಸೋಣ, that is a good suggestion.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವತ್ತು ವಹಿವಾಟು ನಿಂತಿದೆ. ಸಿ ಫಾರಂ ಕೊಟ್ಟಿಲ್ಲ ಎಂದು ಸತ್ಯಾಗ್ರಹ ನಡೆಯುತ್ತಿದೆ. ಸಭಾನಾಯಕರು ಇದ್ದಾರೆ.

ಅಧ್ಯಕ್ಷರು:- ಇಲ್ಲಿ ಎಲ್ಲಾ ಪ್ರಸ್ತಾಪ ಆಗಿದೆ. ತಾವು ಇವತ್ತು ಜನರಲ್ ಡಿಸ್‌ಕಷನ್ ಪ್ರಾರಂಭ ಮಾಡುವವರಿದ್ದೀರಿ. ಆ ಕಾಲಕ್ಕೆ ಫೈನಾನ್ಸ್ ಮಿನಿಸ್ಟರ್ ಅಗತ್ಯ ಬರಲೇಬೇಕಾಗುತ್ತದೆ. ಅವರ ಕಡೆಯಿಂದಲೇ ಹೇಳಿಕೆ ಕೊಡಿಸೋಣ.

(ಗೊಂದಲ)

ಶ್ರೀ ಜಿ.ಎಸ್. ಶಿವನಂಜಪ್ಪ:- ಅಧ್ಯಕ್ಷರೇ, ಇಲ್ಲಿ ರೈತರಿಗೆ ತೊಂದರೆಯಾಗಿದೆ. ಯುಗಾದಿ ಹಬ್ಬ ಬರುತ್ತಾ ಇದೆ.

ಅಧ್ಯಕ್ಷರು:- ನಾನೇ ಹೇಳಿದ್ದೆನಲ್ಲಾ ಆ ಮಾತು.

ಶ್ರೀ ಜಿ.ಎಸ್. ಶಿವನಂಜಪ್ಪ:- ಈಗ ಸಭಾನಾಯಕರು ಹೇಳಬಹುದು. ಡಿಪಾರ್ಟ್‌ಮೆಂಟ್‌ಗೆ ಹೇಳಿಬಿಟ್ಟು ಕರೆಸಿ ಏನು ಸೆಟ್ಲ್‌ಮೆಂಟ್ ಮಾಡಬೇಕೋ ಅದನ್ನು ಮಾಡಬೇಕು. ಇಲ್ಲದಿದ್ದರೆ ನಮ್ಮ ರೈತರಿಗೆ ಬಹಳ ತೊಂದರೆಯಾಗಿದೆ. ಸಾವಿರಾರು ಜನರು ಹೋಗಿ ಅಲ್ಲಿ ನಿಂತಿದ್ದಾರೆ.

ಅಧ್ಯಕ್ಷರು:- ಫೈನಾನ್ಸ್ ಮಿನಿಸ್ಟರ್ ಬರುತ್ತಾರೆ, ಸಂಜೆ ಒಳಗೆ. ಅವರ ಕಡೆಯಿಂದ ಹೇಳಿಕೆ ಕೊಡಿಸೋಣ. ಅಲ್ಲಿಯವರೆಗೆ ನಿಲ್ಲಿಸಲಿ.

ಶ್ರೀ ಬಿ.ಎಸ್. ಶಿವನಂಜಪ್ಪ:- ಮೊದಲು ಸಿ ಫಾರು ಬೇಡ ಎಂದು ಹೇಳಿದರು; 3 ಪರ್ಸೆಂಟ್ ಇಳಿಸಿದರು. ಈಗ 2 ವರ್ಷದಿಂದ....

ಅಧ್ಯಕ್ಷರು:- ಸನ್ಮಾನ್ಯ ಶಿವನಂಜಪ್ಪನವರೇ, ಎಲ್ಲರೂ ಆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ದಯಮಾಡಿ ಈಗ ಕುಳಿತುಕೊಳ್ಳಿ. ತೊಂದರೆಯಾಗಿದೆ ಎಂದು ಮೊದಲು ಹೇಳಿದವನೇ ನಾನು; ನೀವು ಯಾರೂ ಹೇಳಲಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ:- ತೊಂದರೆ ಆಗಿರುವುದು ಯಾರಿಗೆ.

ಅಧ್ಯಕ್ಷರು:- ದಯಮಾಡಿ ಕುಳಿತುಕೊಳ್ಳಿ. ರೈತರಿಗೆ, ಬೆಳೆಗಾರರಿಗೆ ತೊಂದರೆಯಾಗಿದೆ.

ಶ್ರೀ ಜೆ.ಎಸ್.ಶಿವನಂಜಪ್ಪ:- ರೈತರಿಗೆ ತೊಂದರೆ ಆಗಿರುವುದು. ಈಗ ವ್ಯಾಪಾರಸ್ಥರು ಮತ್ತು ಸರ್ಕಾರಕ್ಕೆ ವಿವಾದ ಇದೆ. 3 ಪರ್ಸೆಂಟ್ ಕೊಡಬೇಕೋ, 4 ಪರ್ಸೆಂಟ್ ಕೊಡಬೇಕೋ, 2 ವರ್ಷದ್ದು ಕೊಡಬೇಕೋ, 4 ವರ್ಷದ್ದು ಕೊಡಬೇಕೋ ಎಂದು. ಅವರು ಸಿ ಫಾರಂ ಕೊಟ್ಟಿಲ್ಲ ಎಂದು ಹೇಳಿ 3 ಪರ್ಸೆಂಟಿಗೆ ಇಳಿಸಿ ಅವರಿಗೆ ಮತ್ತೊಂದು ಪರ್ಸೆಂಟ್ ಈಗ ಕೊಡಬೇಕು, 3 ವರ್ಷದ್ದು ಎಂದು ಹೇಳಿ ಟ್ಯಾಕ್ಸ್ ಅಸೆಸ್‌ಮೆಂಟ್ ಮಾಡಿ ಅವರ ಕುತ್ತಿಗೆ ಹಿಸುಕಿರುವುದರಿಂದ ಅವರು ಸ್ಟ್ರೈಕ್ ಮಾಡಿದ್ದಾರೆ. ನಮಗೆ ಬೇರೆ ವ್ಯವಸ್ಥೆ ಇಲ್ಲ. ಮೊರುಕಟ್ಟೆ ಬಿಟ್ಟರೆ ಬೇರೆ ವ್ಯವಸ್ಥೆ ಇಲ್ಲ ರೈತರಿಗೆ. ಸಾವಿರಾರು ಜನ ಅಲ್ಲಿಗೆ ಹೋಗಿ ಕುಳಿತಿದ್ದಾರೆ, ಸಾವಿರಾರು ಮೂಟೆ ಕೊಬ್ಬರಿ ಅಲ್ಲಿದೆ; ಏನು ಮಾಡಬೇಕು ಸ್ವಾಮಿ, ನಾವು ? ಈ ಮಧ್ಯೆದಲ್ಲಿ ಸಭಾನಾಯಕರು ಉತ್ತರ ಕೊಡಲಿ.

ಅಧ್ಯಕ್ಷರು:- ನಾನು ಅವರಿಗೆ ಹೇಳುತ್ತಿದ್ದೇನೆ. ಏನು ಮಾಡಬೇಕು ಹೇಳಿ.

ಒಬ್ಬ ಮಾನ್ಯ ಸದಸ್ಯರು:- ಇವತ್ತು 31ನೇ ತಾರೀಖು ಹಣ ಕಟ್ಟದೇ ಹೋದರೆ ಬ್ಯಾಂಕಿನಲ್ಲಿ ಬಡ್ಡಿ ವಜಾ ಮಾಡುವುದಿಲ್ಲ. ಆದ್ದರಿಂದ ದಯಮಾಡಿ....

ಅಧ್ಯಕ್ಷರು:- ತಮ್ಮೆಲ್ಲರಿಗೂ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದಕ್ಕೆ ಸಂಬಂಧಿಸಿದ ಸಚಿವರು ಸನ್ಮಾನ್ಯ ಸಿದ್ಧರಾಮಯ್ಯನವರು. ಅವರು ಇವತ್ತು ಬರುತ್ತಾರೆ.

ಶ್ರೀ ಜೆ.ಎಸ್.ಶಿವನಂಜಪ್ಪ:- ಸಭಾನಾಯಕರಿದ್ದಾರೆ.

ಅಧ್ಯಕ್ಷರು:- ಎಲ್ಲದಕ್ಕೂ ಸಭಾನಾಯಕ ಕಡೆ ತೋರಿಸಿದರೆ ಹೇಗೆ ? ಎಲ್ಲಾ ಪೋರ್ಟ್‌ಫೋಲಿಯೊವನ್ನು ಅವರ ಕಡೆ ಇಟ್ಟುಕೊಂಡಿದ್ದಾರೆಯೆ ?

ಶ್ರೀ ಜೆ.ಎಸ್.ಶಿವನಂಜಪ್ಪ:- ಅವರು ಇಲ್ಲದಿದ್ದರೂ ಈ ವಿಚಾರದಲ್ಲಿ ಸಭಾನಾಯಕರು ಹೇಳಬಹುದು.

ಅಧ್ಯಕ್ಷರು:- ದಯಮಾಡಿ ಕೇಳಿ, ಸಭಾನಾಯಕರು ತಮ್ಮ ಅಧಿಕಾರವನ್ನು ತಮ್ಮ ಸಹದ್ಯೋಗಿಗಳೊಂದಿಗೆ ಹಂಚಿಕೊಂಡಿದ್ದಾರೆ. ಈ ಇಲಾಖೆಯ ಹೊಣೆಗಾರಿಕೆ ಹೊತ್ತಿರತಕ್ಕಂತಹ ಸನ್ಮಾನ್ಯ ಅರ್ಥಸಚಿವರು ಆ ಮೇಲೆ ಬರಲಿದ್ದಾರೆ. ಅವರ ಕಡೆಯಿಂದ ಸಂಜೆಯ ಒಳಗಾಗಿ ಹೇಳಿಕೆ ಮಾಡಿಸೋಣ.

ಶ್ರೀ ಜೆ.ಎಸ್.ಶಿವನಂಜಪ್ಪ:- :ಈಗಲೇ ಹೇಳಿಸಿದರೆ....

ಅಧ್ಯಕ್ಷರು:- ಹೇಗಾಗುತ್ತದೆ, ಜೈಲಿಗೂ ಅವರೇ ಹೇಳಬೇಕು, ಕೊಬ್ಬರಿಗೂ ಅವರೇ ಹೇಳಬೇಕು, ಪೋಲಿಸರಿಗೂ ಅವರೇ ಹೇಳಬೇಕು ಅಂದರೆ ಸಾಧ್ಯವೇ ಅದು? ಈ ರೀತಿ ಕೆಲಸ ಮಾಡುವುದಕ್ಕೆ ಆಗುತ್ತದೆಯೆ ?

ಶ್ರೀ ಬಿ.ಶಿವರಾಮು:- ಕೆಲವು ಸಾರಿ ಹೇಳಬೇಕಾಗುತ್ತದೆ.

ಅಧ್ಯಕ್ಷರು:- ಹೌದು ಹೌದು, ಹಾಗೆ ಮಾಡಿಸೋಣ, ನೀವು ಮುಖ್ಯ ಮಂತ್ರಿಗಳಾದಾಗ ಹಾಗೆ ಮಾಡಿಸೋಣ. ಶಿವರಾಮುರವರೇ ಕುಳಿತುಕೊಳ್ಳಿ, ದಯಮಾಡಿ. ತಾಳ್ಮೆ ಪರೀಕ್ಷೆ ಮಾಡಬಾರದು. ಇದೆಲ್ಲಾ ಸದುದ್ದೇಶದ ಅಭಾವದಿಂದ ಆಗತಕ್ಕಂತಹ ಸನ್ನಿವೇಶಗಳು. ಹೀಗಾಗಬಾರದು; ನಂಜಾಮರಿಯವರು ಬಂದು ನಾಲ್ಕೈದು ಸಲ ನನ್ನ ಹತ್ತಿರ ನಿವೇದಿಸಿಕೊಂಡಿದ್ದಾರೆ ಎಂದು, ಅವರು ಮೊದಲನೇ ಸಾರಿ ಆರಿಸಿಬಂದಿದ್ದಾರೆ ಎಂದು ಹೇಳಿ ಈ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿದರೆ ಅದನ್ನೇ ದೊಡ್ಡ ಚರ್ಚೆಗೆ ಪ್ರಾರಂಭ ಮಾಡಿಸಿಬಿಡುತ್ತೀರಲ್ಲಾ ? ಇನ್ನು ನಾವು ಇಟ್ಟುಕೊಂಡಿರತಕ್ಕಂತಹ ಉಳಿದ ಕೆಲಸ ಏನು ಆಗಬೇಕು? ವ್ಯಾಖ್ಯಾನಗಳು ಬೇಡಿ, ದಯಮಾಡಿ ಕುಳಿತುಕೊಳ್ಳಿ, ಈಗ ಶ್ರೀಮಾನ್ ಮುದ್ದಹನುಮೇಗೌಡರನ್ನು ಕರೆಯುತ್ತಾ ಇದ್ದೇನೆ. ಅವರು ಹೇಮಾವತಿ ನಾಲೆಗೆ ಸಂಬಂಧಿಸಿದಂತೆ ಏನೋ ಮಾತನಾಡಬೇಕೆಂದು ಹೇಳಿದ್ದಾರೆ. ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಅರ್ಥಸಚಿವರು ಹೇಳಿಕೆ ಕೊಡುತ್ತಾರೆ.

ವಿಷಯ :- ಹೇಮಾವತಿ ನಾಲೆ ಕೆಲಸ ಸ್ಥಗಿತಗೊಂಡಿರುವ ಬಗ್ಗೆ. ------

ಶ್ರೀ ಎಸ್.ಪಿ.ಮುದ್ದಹನುಮೇಗೌಡ:- ಸನ್ಮಾನ್ಯ ಸಭಾಧ್ಯಕ್ಷರೇ, ರೈತರ ಬಗ್ಗೆ ಮತ್ತೊಂದು ಪ್ರಮುಖವಾದಂತಹ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತೇನೆ.

ಶ್ರೀ ಎಂ.ಶ್ರೀನಿವಾಸ್:- ಅಧ್ಯಕ್ಷರೇ.....

ಅಧ್ಯಕ್ಷರು:- ಆಯಿತು, ಇದಾದಮೇಲೆ ಕರೆಯುತ್ತೇನೆ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ.ಶ್ರೀನಿವಾಸ್:- ಅಲ್ಲಿ 400 ಗುಡಿಸಲುಗಳಿಗೆ ಬೆಂಕಿ ಇಟ್ಟಿದ್ದಾರೆ. ಊಟ ಇಲ್ಲ ಅವರಿಗೆ.

ಅಧ್ಯಕ್ಷರು:- ಹಾಗಾದರೆ ಅವರು ಮಾತನಾಡುವುದು ಬೇಡವೇ ?

ಶ್ರೀ ಎಂ.ಶ್ರೀನಿವಾಸ:- ನಾನು ನಿನ್ನೆಯಿಂದ ಹೇಳುತ್ತಿದ್ದೇನೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಕಾವೇರಿ ಜಲಾನಯನ ಪ್ರದೇಶಕ್ಕೆ ಬರತಕ್ಕಂತಹ ಹೇಮಾವತಿ ನಾಲೆ ಕಾಮಗಾರಿ ಕೆಲಸ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಕಳೆದ ಮೂರು ನಾಲ್ಕು ತಿಂಗಳಿಂದ ಈ ಕೆಲಸ ಸಂಪೂರ್ಣವಾಗಿ ಸ್ಥಗಿತಗೊಂಡಿರುವುದರಿಂದ ತುಮಕೂರು ಜಿಲ್ಲೆಯಲ್ಲಿ ರೈತರು ಈ ಹೇಮಾವತಿ ನಮಗೆ ವರದಾನ ಎಂದು ಏನು ಭಾವಿಸಿಕೊಂಡಿದ್ದರು, ಆ ಜಾಗದಲ್ಲಿ ಇವತ್ತು ಈ ಹೇಮಾವತಿ ನಾಲಾ ಯೋಜನೆಯ ಅನುಷ್ಠಾನದ ಬಗ್ಗೆ ಒಂದು ಅನುಮಾನ ಮತ್ತು ಕಳವಳ ಉಂಟಾಗಿದೆ. ಇವತ್ತು 300 ಕೋಟಿ ರೂ.ಹಣವನ್ನು